## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1129

ಮಾನ್ಯ ಸದಸ್ಯರ ಹೆಸರು ಶ್ರೀ ಹೆಚ್.ಎಸ್.ಗೋಪಿನಾಥ್

(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸಬೇಕಾದ ದಿನಾಂಕ 18.12.2024

ಉತ್ತರಿಸುವ ಸಚಿವರು ಕಂದಾಯ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಭಾಷಾವಾರು ಪ್ರಾಂತ್ಯಗಳ ವಿಂಗಡಣೆಯಾಗಿ ಸುಮಾರು 68 ವರ್ಷಗಳು ಕಳೆದರೂ ಭೂದಾಖಲೆಗಳಿಗಾಗಿ ಇಂದಿಗೂ ತಮಿಳುನಾಡಿನ ಕಂದಾಯ ಕಛೇರಿಗಳಿಗೆ ಅಲೆದಾಡುವ ಪರಿಸ್ಥಿತಿ ಆನೇಕಲ್ ತಾಲ್ಲೂಕಿನ ಮರಸೂರು ಗ್ರಾಮ ಪಂಚಾಯಿತಿಯ 8 ಗ್ರಾಮಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರವು ಯಾವ ಕ್ರಮ ಕೈಗೊಂಡಿದೆ: (ವಿವರ ನೀಡುವುದು) | ಬಂದಿದೆ.<br>ಆನೇಕಲ್ ತಾಲ್ಲೂಕಿನ ಮರಸೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ 8 ಗ್ರಾಮಗಳ ರೈತರು ಭೂದಾಖಲೆಗಳಿಗಾಗಿ ಇಂದಿಗೂ ತಮಿಳುನಾಡಿನ ಕಂದಾಯ ಕಛೇರಿಗಳಿಗೆ ಅಲೆಯ ಬೇಕಾದ ಪರಿಸ್ಥಿತಿ ಇದ್ದು, ಸದರಿ ಮರಸೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ 8 ಗ್ರಾಮಗಳ ಜಮೀನುಗಳ ದಾಖಲೆಗಳ ಕುರಿತು ಪರಿಶೀಲಿಸಿ, ಕಛೇರಿಯಲ್ಲಿ (ಅಭಿಲೇಖಾಲಯ) ಲಭ್ಯವಿಲ್ಲದಿರುವ / ಶಿಥಿಲವಾಗಿರುವ ಆಕಾರಬಂದು ಇತ್ಯಾದಿ ಭೂದಾಖಲೆಗಳನ್ನು ಪರ್ಯಾಯ ಲಭ್ಯ ಭೂದಾಖಲೆಗಳ (ಹಿಸ್ಸಾ ಟಿಪ್ಪಣಿ/ಪಕ್ಕಾ ಪುಸ್ತಕ ಇತ್ಯಾದಿಗಳ) ಆಧಾರದ ಮೇಲೆ ನಿಯಮಾನುಸಾರ ಪರಿಶೀಲಿಸಿಕೊಂಡು ಪ್ರಾದೇಶಿಕ ಭೂದಾಖಲೆಗಳ ಜಂಟಿ ನಿರ್ದೇಶಕರು, ಬೆಂಗಳೂರು ವಿಭಾಗ ಇವರ ಮೇಲ್ವಿಚಾರಣೆಯಲ್ಲಿ ಪುನರ್ ನಿರ್ಮಾಣ ಮಾಡಿಕೊಂಡು, ಸರಿಯಾದ ಭೂದಾಖಲೆಗಳನ್ನು ನಿರ್ವಹಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.<br>ಮುಂದುವರೆದು, ತಹಶೀಲ್ದಾರ್ ಆನೇಕಲ್ ತಾಲ್ಲೂಕು ರವರು ತಮಿಳುನಾಡು ರಾಜ್ಯದ ಹೊಸೂರು ತಾಲ್ಲೂಕಿನ ತಹಶೀಲ್ದಾರ್ ರವರಿಗೆ ಮೂಲ ಕಂದಾಯ ದಾಖಲಾತಿಗಳಾದ ಪಟ್ಟಾ, ಚಿಟ್ಟಾ FMB ದಾಖಲೆಗಳು ಮತ್ತು ಎ1 ರಿಜಿಸ್ಟರ್ ದಾಖಲೆಗಳು ಲಭ್ಯವಿದ್ದಲ್ಲಿ ಸದರಿ ಕಡತಗಳನ್ನು ಒದಗಿಸುವಂತೆ ಪತ್ರ ಬರೆಯಲಾಗಿದೆ. |
| ಆ) | 8 ಗ್ರಾಮದ ರೈತರು ಕಂದಾಯ ದಾಖಲೆಗಳಿಗಾಗಿ ಚೆನ್ನೈಗೆ ಹೋಗುತ್ತಿರುವುದು ಮತ್ತು ಜಮೀನು ಮಾರಾಟ, ಹಕ್ಕು ಪತ್ರ ಸೇರಿ ಮತ್ತಿತರ ಸಂದರ್ಭಗಳಲ್ಲಿ ದಾಖಲೆಗಳು ಕರ್ನಾಟಕ ಸರ್ಕಾರದಿಂದ ಮಾನ್ಯಗೊಳ್ಳುತ್ತಿಲ್ಲವಾದ ಕಾರಣ ಗ್ರಾಮಸ್ಥರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು: | |
| ಇ) | ಸರ್ಕಾರವು ಇದನ್ನು ಗಂಭೀರವಾಗಿ ಪರಿಗಣಿಸಿ ಯಾವ ಕಾಲಮಿತಿಯೊಳಗೆ ಈ ತೊಂದರೆಯನ್ನು ಸರಿಪಡಿಸಿ ಗ್ರಾಮಸ್ಥರಿಗೆ ನೆಮ್ಮದಿಯಿಂದ ಜೀವನ ಸಾಗಿಸಲು ಅನುಕೂಲ ಮಾಡಿಕೊಡುವುದು? (ಸಂಪೂರ್ಣ ವಿವರ ನೀಡುವುದು) | |

ಸಂಖ್ಯೆ: ಕಂಇ 213 ಎಸ್ಎಸ್‌ಸಿ 2025

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು